AMOUNT SPENT UNDER 'FAMINE RELIEF' HEAD IN HASSAN DISTRICT.

92. Sri K. H. HANUME GOWDA (Hassan).—

Will the Minister for Revenue be pleased to state :—

(*a*) the amount spent under 'Famine Relief' head from 1970 to 1972 in the Taluks of Hassan District; (Talukwise information may please be furnished);

(*b*) the steps taken by Government under permanent famine relief programme; the expenditure incurred in this behalf ?

Sri N. HUTCHAMASTHY GOWDA (Minister for Revenue).—

(*a*) The Details regarding the expenditure incurred from 1970-71 to 1972-73 (31st October 1972) under the head '64 Famine Relief' is as follows :—

	Rs.
Hassan	10,89,314
Channarayapatna	11,28,448
Arasikere	13,26,664
Holenarasipur	10,32,230
Arakalagudu	5,35,026
Belur	5,57,847
Alur	65,000.

(*b*) The followong programme has been undertaken for permanent famine relief'—

(1) The Bore Wells.

(2) Hemavathi Reservoir (Irrigation).

Amount Spent

(1) Bore Wells	3,16,169.58
(2) Hemavathi Reservoir (Irrigation).	16,58,22,685.00

ಶ್ರೀ ಕೆ. ಎಚ್. ಹನುಮೇಗೌಡ.—ಶಾಶ್ವತ ಪರಿಹಾರದ ಬಗ್ಗೆ ಕೊಳವೆ ಬಾವಿಗಳಿಗಾಗಿ 3,16,169 ರೂಪಾಯಿಗಳನ್ನು, ಹೇಮಾವತಿ ಜಲಾಶಯ (ನೀರಾವರಿ) ಗಾಗಿ 16,58,685 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದೀರಿ. ನಮ್ಮ ಜಿಲ್ಲೆಯಲ್ಲಿ ಕಳೆದ 7-8 ವರ್ಷಗಳಿಂದ ವ್ಯವಸಾಯವನ್ನೇ ನಂಬಿಕೊಂಡಿರುವ ಜನರು ಲಕ್ಷಾಂತರ ಮಂದಿ ಇದ್ದಾರೆ. ಈ ಬಗ್ಗೆ ಅನೇಕ ಸಲ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದರೂ ಸಹ ಸರ್ಕಾರದವರು ಈಗ ತೆಗೆದುಕೊಂಡಿರುವ ಎರಡು ಕೆಲಸಗಳಿಂದ ಯಾರಿಗೂ ಪರಿಹಾರ ದೊರೆತಿಲ್ಲ. ಈಗಲೂ ಸಹ ಜನರು ಸರ್ಕಾರದ ಕಡಗೇ ನೋಡುತ್ತಿದ್ದಾರೆ. ಆದ್ದರಿಂದ ಏನೇನು ಶಾಶ್ವತ ಪರಿಹಾರ ಕಾಮಗಾರಿಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದಿದ್ದಾರೆಂಬುದನ್ನು ತಿಳಿಸುತ್ತಾರೆಯೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶಾಶ್ವತ ಪರಿಹಾರ ಕಾಮಗಾರಿಗಳಾದ ಹೇಮಾವತಿ ಮತ್ತು ಯಗಚಿ ಯೋಜನೆಗಳ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ವ್ಯವಸಾಯವನ್ನೇ ಪೂರ್ತಿಯಾಗಿ ಅಂಟಿಕೊಂಡು ಇರತಕ್ಕಂಥ ಜನರಿಗೆ ಉಪಕಸುಬುಗಳನ್ನು ಮಾಡುವಂತಾಗಲು, ಪಶುಪಾಲನೆ ಮಾಡಲು, ಕೋಳಿ ಕುರಿ ಸಾಕಲು ನೂಕ್ಕ ವ್ಯವಸ್ಥೆ ಮಾಡುತ್ತೀರಾ ? ಮತ್ತು ಇದರ ಜೊತೆಗೆ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ ಆ ಜನರಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಶಾಶ್ವತ ಪರಿಹಾರ ಕಾಮಗಾರಿಗಳನ್ನು ಏನೇನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಕ್ಕೆ ಈ ಉತ್ತರವನ್ನು ಕೊಡಲಾಗಿದೆ. ಈಗ ಮಾನ್ಯ ಸದಸ್ಯರು ಏನು ಸೂಚನೆ ಮಾಡಿದ್ದಾರೆ ಅದನ್ನು ಆಲೋಚನೆ ಮಾಡುವುದಕ್ಕೆ ರಾಯಕ್ಕಾದ ವಿಷಯ.

ಶ್ರೀ ಎಚ್. ಡಿ. ದೇವೇಗೌಡ.—ಹೇಮಾವತಿ ಯೋಜನೆಯಿಂದ ಹಾಸನ ಜಿಲ್ಲೆಯ ಎಲ್ಲ ಭಾಗಗಳಿಗೂ ನೀರಾವರಿಯಾಗುವುದಿಲ್ಲ. ಕೆಲವು ಭಾಗಗಳಿಗೆ ಅನುಕೂಲವಾಗಬಹುದು. ಆದಕಾರಣ ಈ ಜಿಲ್ಲೆಯ ಯಾವ ಯಾವ ಭಾಗಗಳು ಬರಗಾಲಕ್ಕೆ ತುತ್ತಾಗಿವೆಯೋ, ಆ ಭಾಗಗಳಲ್ಲಿ ಜುಯಾ ರಾಜಿಕರ್ ಇರಾಖೆಯವರ ಸಹಾಯದಿಂದ ಎಲ್ಲೆಲ್ಲಿ ನೀರು ಸಿಗುತ್ತದೆ ಎಂಬುದನ್ನು ತಿಳಿದುಕೊಂಡು ಆ ಭಾಗಗಳಲ್ಲಿ ಬಾವಿಗಳನ್ನು ತೆಗೆಸಿ ನೀರಾವರಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಉತ್ತರದಲ್ಲಿ ಕೊಟ್ಟಿರತಕ್ಕಂಥ ಕೊಳವೆ ಬಾವಿಗಳನ್ನು ತೆಗೆಸಿರುವುದು ಕುಡಿಯುವ ನೀರಿನ ಸಲುವಾಗಿ. ಮಾನ್ಯ ಸದಸ್ಯರು ಹೇಮಾವತಿ ಮತ್ತು ಯಗಚಿ ಯೋಜನೆಗಳಿಂದ ನೀರಾವರಿ ಸೌಲಭ್ಯ ದೊರೆಯದ ಕಡೆಗಳಲ್ಲಿ ವ್ಯವಸಾಯ ಮಾಡಲು ಬಾವಿಗಳನ್ನು ತೋಡಿಸಬೇಕೆಂದು ಸಲಹೆ ಮಾಡಿದರು. ಅದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕ್ಷಾಮ ನಿವಾರಣೆಗಾಗಿ ಕಾಯಂ ಆದಂಥ ಯಾವ ಯಾವ ಯೋಜನೆಗಳನ್ನು ರೂಪಿಸಿದ್ದೀರಿ. ಅದರಲ್ಲಿ ನೀರಾವರಿ ಬಾವಿಗಳನ್ನು ತೋಡಿಸುವ ಕಾರ್ಯಕ್ರಮವೂ ಸೇರಿದೆಯೇ ? ಸೇರಿದ್ದರೆ ಎಷ್ಟು ಬಾವಿಗಳನ್ನು ತೆಗೆಸಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶಾಶ್ವತ ಪರಿಹಾರ ಕಾಮಗಾರಿಗಳನ್ನು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆಬೇರೆ ತರಹ ಕೈಕೊಳ್ಳಲಾಗಿದೆ. ಹಾಸನ ಜಿಲ್ಲೆಯ ಬಗ್ಗೆ ಶಾಶ್ವತ ಪರಿಹಾರ ಕಾಮಗಾರಿಗಳನ್ನು ಏನೇನು ಕೈಕೊಳ್ಳಲಾಗಿದೆ ಎಂಬುದನ್ನು ಉತ್ತರದಲ್ಲಿ ತಿಳಿಸಲಾಗಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಶಾಶ್ವತ ಪರಿಹಾರ ಕಾಮಗಾರಿಗಳ ಜೊತೆ ಸಾಮೂಹಿಕ ನೀರಾವರಿ ಬಾವಿಗಳನ್ನು ತೋಡಿಸುವ ಕಾರ್ಯಕ್ರಮವೂ ಸೇರಿಲ್ಲವೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಜಿಲ್ಲೆಯಲ್ಲಿ ಸಾಮೂಹಿಕ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿರುವ ಬಗ್ಗೆ ಅಂಕಿಅಂಶಗಳು ಇಲ್ಲ. ನೀರಾವರಿ ಬಾವಿಗಳನ್ನು ತೋಡಿಸುವ ಸಲುವಾಗಿ ಸಾಲಗಳನ್ನು ಕೊಡಲಾಗುತ್ತಿದೆ. ಅದರಂತೆ ಕೆಲವರು ಸಾಲ ತೆಗೆದುಕೊಂಡು ಬಾವಿ ತೆಗೆಸಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಪ್ರತಿವರ್ಷವೂ ರಾಜ್ಯದ ನಾನಾ ಭಾಗಗಳಲ್ಲಿ ಕ್ಷಾಮ ಡಾಮರಗಳು ಉಂಟಾಗುತ್ತಿರುವುದು ನಮ್ಮ ಅನುಭವದಲ್ಲಿ ಕಂಡುಬಂದಿದೆ. ಇದರಿಂದ ರಾಜ್ಯದಲ್ಲಿ ಆಹಾರದ ಮತ್ತು ನೀರಿನ ಕೊರತೆ ಉಂಟಾಗುತ್ತಿರುವುದರಿಂದ, ಅದನ್ನು ಪರಿಹಾರ ಮಾಡಲು ಒಂದು ಶಾಶ್ವತವಾದಂಥ ಫ್ಯಾಮಿನ್ ರಿಲೀಫ್ ಬೋರ್ಡನ್ನು ರಚಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಸದ್ಯಕ್ಕೆ ಸರ್ಕಾರದ ಯೋಚನೆಯಲ್ಲಿ ಇಲ್ಲ.

ಶ್ರೀ ಕೆ. ಪ್ರಭಾಕರ್.—64 ಕ್ಷಾಮ ನಿವಾರಣ ಬಾಬಿನಿಂದ ಕಮ್ಯುನಿಟಿ ಇರಿಗೇಷನ್ ವೆರ್ಲ್ಸ್‌ನ್ನು ಸಹ ತೆಗೆಸಬಹುದೆಂದು ಸರ್ಕಾರದ ಆದೇಶವಿದೆ. ಆದಕಾರಣ ಈ ಕಮ್ಯುನ್ನು ತೆಗೆಸಿರುವ ಬಾವಿಗಳ ಸಂಖ್ಯೆ ಎಷ್ಟು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಮ್ಯುನಿಟಿ ಇರಿಗೇಷನ್ ವೆರ್ಲ್ಸ್‌ನ್ನು ಈ ಜಿಲ್ಲೆಯಲ್ಲಿ ತೆಗೆದುಕೊಂಡಿಲ್ಲ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಒಟ್ಟಿನಲ್ಲಿ ನೀರಾವರಿ ಯೋಜನೆಗಳಿಂದ ಯಾವ ಯಾವ ಕ್ಷೇತ್ರಕ್ಕೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರೆಯುವುದಿಲ್ಲವೋ ಆ ಭಾಗಗಳಲ್ಲಿ ಅಂದರೆ ಪ್ರತಿ ಗ್ರಾಮದಲ್ಲಿಯೂ 10 ಬಾವಿಗಳನ್ನು ತೆಗೆಸುವ ಬಗ್ಗೆ ರಾಜ್ಯದ ನಷಿವ ಸಂಪುಟವು ತೀರ್ಮಾನ ತೆಗೆದು ಕೊಂಡಿದೆ. ನಮ್ಮ ಹಾಸನ ಜಿಲ್ಲೆಯ ಅರಸೀಕೆರೆ, ಅರಕಲಗೂಡು, ಚನ್ನರಾಯಪಟ್ಟಣ ಮತ್ತು ಹೊಳೆನರಸಿಪುರ ತಾಲ್ಲೂಕುಗಳಲ್ಲಿ ಅನೇಕ ಬಾಗಗಳು ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುತ್ತಿರುವದರಿಂದ, ಆ ಭಾಗಗಳಲ್ಲಿಯೂ ಸಹ ನೀರಾವರಿ ಬಾವಿಗಳನ್ನು ತೆಗೆಸಿ ಅಲ್ಲಿರುವ ರೈತರಿಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗತಾನೆ ನನಗೆ ಗೊತ್ತಾದ ಸಮಾಚಾರದ ಪ್ರಕಾರ ಹಾಸನ ಜಿಲ್ಲೆಯಲ್ಲಿ ಕೆಲವು ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ತೆಗೆದುಕೊಳ್ಳಲಾಗಿದೆ. ಅದರ ಜೊತೆಗೆ ಮಾನ್ಯ ಸದಸ್ಯರು ಕೊಟ್ಟ ಸಲಹೆಯ ಬಗ್ಗೆ ಹೇಳುವುದಾದರೆ, ನೀರಾವರಿ ಬಾವಿಗಳನ್ನು ತೋಡಿಸುವ ಸಲುವಾಗಿ ಭೂಅಭಿವೃದ್ಧಿ ಬ್ಯಾಂಕಿನಿಂದ ಸಾಲ ಕೊಡಲಾಗುತ್ತದೆ. ಇದರ ಜೊತೆಗೆ ಭೂಗರ್ಭ ಅಧಿಕಾರಿಗಳ ಸಲಹೆ ಪಡೆದು ಇನ್ನೂ ಹೆಚ್ಚು ಹೆಚ್ಚಾಗಿ ಯಾವ ಯಾವ ಪ್ರದೇಶಗಳಿಗೆ ಬಾವಿಗಳನ್ನು ತೋಡಿಸುವುದು ಸಾಧ್ಯ ಎಂಬುದನ್ನು ತಿಳಿದುಕೊಂಡು ಮಾಡಬೇಕಾದುದು ಸಹಜ. ಅದರಂತೆ ಮಾಡುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಕ್ಷಾಮ ಪರಿಹಾರ ನಿಧಿಯಿಂದ ನಮ್ಮ ಹಾಸನ ಜಿಲ್ಲೆಗೆ ಈ ವರ್ಷ 30 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಒದಗಿಸಿದ್ದರು. ಆದರೆ ಕಳೆದ 8 ದಿವಸಗಳ ಹಿಂದೆ ಆ ಹಣದಲ್ಲಿ ವಿಭಾಗಾಧಿಕಾರಿಯವರು ಒಂಭತ್ತೂವರೆ ಲಕ್ಷ ರೂಪಾಯಿಗಳನ್ನು ವಾಪಸ್ ತೆಗೆದುಕೊಂಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಬತ್ತ ಒಂದನ್ನು ಬಿಟ್ಟು ಉಳಿದ ಯಾವ ಬೆಳೆಗಳೂ ಸಹ ಆಗಿಲ್ಲ. ಪರಿಸ್ಥಿತಿಯು ಸುಧಾರಿಸದೇ ಇದ್ದರೂ ಸಹ ಆ ಭಾಗಕ್ಕೆ ಕೊಟ್ಟಿರತಕ್ಕಂಥ ಹಣವನ್ನು ಸಹ ವಾಪಸ್ ಪಡೆದುಕೊಂಡು ಕೆಲಸಗಳನ್ನು ಅರ್ಧದಲ್ಲಿಯೇ ನಿಲ್ಲಿಸಿದ್ದು ಸರಿಯೇ? ಮತ್ತೆ ಹಣವನ್ನು ಒದಗಿಸಿ ಜನರಿಗೆ ಕೆಲಸಗಳನ್ನು ಒದಗಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸಭೆಗೆ ಗೊರುತ್ತಿರುವಂತೆ ರಾಜ್ಯದ ದಕ್ಷಿಣ ಭಾಗಗಳಲ್ಲಿರುವ ಪ್ರದೇಶಗಳಿಗೆ ಜಿಲ್ಲಾವಾರು ಇಷ್ಟಿಷ್ಟು ಎಂದು ಹಣವನ್ನು ಒದಗಿಸಿದ್ದು ನಿಜ. ಆದರೆ ಈ ಭಾಗಗಳ ಪೈಕಿ ಕೆಲವು ಕಡೆಗಳಲ್ಲಿ ಮಳೆ ಬಂದು ಪರಿಸ್ಥಿತಿ ಉತ್ತಮಗೊಂಡಿದ್ದರಿಂದ ಮತ್ತು ರಾಜ್ಯದ ಉತ್ತರ ಭಾಗದಲ್ಲಿನ ಪರಿಸ್ಥಿತಿ ತೀರ ಹದಗೆಟ್ಟಿದ್ದರಿಂದ, ದಕ್ಷಿಣ ಭಾಗಗಳಿಗೆ ಹಣ ಕೊಡುವುದನ್ನು ನಿಲ್ಲಿಸಿ ಉತ್ತರ ಭಾಗಗಳಿಗೆ ಹೆಚ್ಚು ಖರ್ಚು ಮಾಡಬೇಕಾಯಿತು.

BUS STAND AT BORGAON TOWN

164. Sri J. S. AMMANNAVAR (Sadalga).—

Will the Minister for Labour be pleased to state:—

(*a*) the number of Mysore and Maharashtra State Transport buses that touch and stop at the Borgaon town in the Chikodi Taluk;

(*b*) whether it has come to the notice of Government that there is heavy traffic on these routes touching Borgaon town;

(*c*) whether there is any shelter or waiting room for the passengers at the bus stand;

(*d*) if not, is there any proposal to construct the same;

(*e*) whether they are aware that it is a fit place to have a Sub-Depot of the State Transport?